# ಹೃದಯವಂತಿಕೆಯೇ ಸೌಂದರ್ಯ

‘ರೆಹ್ನಾ ಹೈ ತೇರೆ ದಿಲ್ ಮೇ’ ಸಿನಿಮಾದ ಮೂಲಕ ಬಿಟೌನ್‌ಗೆ ಕಾಲಿಟ್ಟವರು ನಟಿ ದಿಯಾ ಮಿರ್ಜಾ. ಕಳೆದ ವರ್ಷ ಬಿಡುಗಡೆ ಕಂಡ ‘ಸಂಜು’ ಚಿತ್ರದ ಮೂಲಕ ಮತ್ತೆ ಮುನ್ನೆಲೆಗೆ ಬಂದರು. ಮಾಜಿ ಮಿಸ್ ಏಶಿಯಾ ಫೆಸಿಫಿಕ್, ನಟಿ, ನಿರ್ಮಾಪಕಿ, ವಾಣಿಜ್ಯೋದ್ಯಮಿ, ಪರಿಸರವಾದಿ... ಹೀಗೆ ಹಲವು ಕ್ಷೇತ್ರಗಳಲ್ಲಿ ತೊಡಗಿಕೊಂಡವರು. ಸುಸ್ಥಿರ ಪರಿಸರಕ್ಕಾಗಿ ಹಲವಾರು ಅಭಿಯಾನಗಳೊಂದಿಗೆ ಕೈಜೋಡಿಸಿದ್ದಾರೆ. ಭಾರತಕ್ಕೆ ವಿಶ್ವಸಂಸ್ಥೆಯ ಪರಿಸರ ಸದ್ಭಾವನಾ ರಾಯಭಾರಿ ಆಗಿದ್ದಾರೆ. ಬೆಂಗಳೂರಿನಲ್ಲಿ ನಡೆದ ‘ಎಫ್‌ಬಿಬಿ ಕಲರ್ಸ್ ಫೆಮಿನಾ ಮಿಸ್ ಇಂಡಿಯಾ ಸೌತ್ 2019’ ಕಾರ್ಯಕ್ರಮಕ್ಕೆ ದಕ್ಷಿಣ ವಲಯದ ಮೆಂಟರ್ ಆಗಿ ಆಗಮಿಸಿದ್ದ ದಿಯಾ, ‘ಮಾಡುವ ಪ್ರತಿಯೊಂದು ಕೆಲಸವನ್ನೂ ಆತ್ಮತೃಪ್ತಿಗಾಗಿ ಮಾಡಬೇಕು. ಮೊದಲು ಕೆಲಸವನ್ನು ಪ್ರೀತಿಸಬೇಕು’ ಎನ್ನುತ್ತಾರೆ. ಎರಡು ದಶಕಗಳ ಅನುಭವದಲ್ಲಿ ಕಂಡುಂಡ ಸತ್ಯಗಳು–ಸವಾಲುಗಳು, ಮೊಗೆದ ಗೆಲುವುಗಳು, ಅಪ್ಪಳಿಸಿದ ಸೋಲುಗಳನ್ನು ‘ಸುಧಾ’ ಜೊತೆಗೆ ಹಂಚಿಕೊಂಡಿದ್ದಾರೆ.



■ ಸುಶೀಲಾ ಡೋಣೂರ

◆ **ದಿಯಾ ಮಿರ್ಜಾ ಭಾವಜೀವಿ... ಅಲ್ಲ ತುಂಬಾ ಬೋಲ್ಡ್... ಬುದ್ಧಿವಂತೆ... ಅಲ್ಲಲ್ಲ, ದಿಯಾ ಮುಗ್ಧೆ... ಯಾವ ಹೇಳಿಕೆ ಸರಿ. ನಿಮ್ಮ ನಿಜವಾದ ಸ್ವಭಾವ ಯಾವುದು?**

ಮೊದಲ ಹೇಳಿಕೆ ಸರಿ. ನಾನು ಭಾವಜೀವಿ. ಯಾವುದೇ ಕೆಲಸವನ್ನೂ ಹೃದಯದಿಂದಲೇ ಮಾಡುತ್ತ ಬಂದಿದ್ದೇನೆ. ಯಾವುದೇ ನಿರ್ಧಾರವಾಗಲಿ, ನಿರ್ಣಯಗಳಾಗಲಿ, ಯೋಜನೆಗಳೇ ಇರಲಿ, ಮನಸ್ಸಿನಿಂದ ಮಾಡಿದ್ದೇ ಹೆಚ್ಚು, ಮಿದುಳಿನಿಂದಲ್ಲ. ಜೀವನದ ಕೆಲವು ಅನುಭವಗಳಿಂದ ಪಾಠ ಕಲಿತಿದ್ದೇನೆ. ಈಗ ಕೆಲವು ಸಂಗತಿಗಳನ್ನು ಹೃದಯದಿಂದಲೂ ಮಿದುಳಿನಿಂದಲೂ ಅಳೆದು–ತೂಗಿ ಮಾಡುತ್ತೇನೆ.

◆ **ತುಂಬಾ ಕಡೆ ನಿಮ್ಮ ಮಲತಂದೆ ‘ಮಿರ್ಜಾ’ ಅವರ ಬಗ್ಗೆ ಹೇಳಿಕೊಂಡಿದ್ದೀರಿ... ಅವರಂದ್ರೆ ನಿಮಗೆ ಅಷ್ಟೊಂದು ಪ್ರೀತಿಯೆ?**

ಹೆತ್ತಪ್ಪ–ಹೆತ್ತಮ್ಮ ಪರಸ್ಪರ ದೂರವಾಗಿ, ಇನ್ನೊಬ್ಬ ವ್ಯಕ್ತಿ ತಂದೆಯ ಸ್ಥಾನದಲ್ಲಿ ನಿಂತಾಗ ಐದು ವರ್ಷದ ಮಗುವಿನ ಸ್ಥಿತಿ ಹೇಗಿರುತ್ತೆ? ನನ್ನ ಜೀವನದಲ್ಲೂ ಅದೊಂದು ಸಂದಿಗ್ಧ ಕಾಲ. ಒಂದೇ ದಿನದಲ್ಲಿ ಅವರನ್ನು ತಂದೆ ಅಂತ ಒಪ್ಪಿಕೊಳ್ಳಲು ಸಾಧ್ಯವಿರಲಿಲ್ಲ. 9ನೇ ವರ್ಷಕ್ಕೆ ನನ್ನ ಹೆತ್ತಪ್ಪನನ್ನು ಕಳೆದುಕೊಂಡೆ. ಅಪ್ಪ ಇನ್ನಿಲ್ಲ ಎನ್ನುವ ಸತ್ಯವನ್ನು ಒಪ್ಪಿಕೊಳ್ಳುವುದು ಕಷ್ಟವಾಗಿತ್ತು. ಆಗ ಅವರು ಹೇಳಿದ್ದೊಂದೇ ಮಾತು – ‘ನಿನ್ನ ತಂದೆಯ ಸ್ಥಾನವನ್ನು ನಾನು ತುಂಬಲು ಸಾಧ್ಯವಿಲ್ಲ. ಆ ಪ್ರಯತ್ನವನ್ನೂ ಮಾಡಲಾರೆ. ಆದರೆ ಸ್ನೇಹಿತನಾಗಿ ನಿನ್ನೊಂದಿಗಿರಬಲ್ಲೆ’. ಕೊನೆವರೆಗೂ ಆ ಮಾತನ್ನು ಉಳಿಸಿಕೊಂಡರು. ಎಲ್ಲ ಸಂದರ್ಭಗಳಲ್ಲೂ ನನ್ನೊಂದಿಗಿದ್ದರು. ಆಗೊಮ್ಮೆ ಪ್ರೇಮವೈಫಲ್ಯದಿಂದ ಕುಸಿದುಹೋದಾಗಲೂ ಅವರೇ ಸಂತೈಸಿದ್ದು. ನನ್ನ ಹೆಸರಿನ ಮುಂದಿರುವುದು ಅವರದೇ ಮನೆತನದ ಹೆಸರು ‘ಮಿರ್ಜಾ’. ಅವರೂ ನನ್ನ ತಂದೆ ಅಂತ